Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( **EXTRAORDINARY** )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |

**Ministry of Law and Justice**
Legislative Department
New Delhi, 04th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ, 2008

## (2009ರ ಅಧಿನಿಯಮ ಸಂಖ್ಯೆ 7)

[7ನೇ ಜನವರಿ, 2009]

ಆರ್ಥಿಕ, ಜನಾಂಗ ಸ್ಥಿತಿ ವಿವರಣೆ, ಸಾಮಾಜಿಕ, ವೈಜ್ಞಾನಿಕ ಮತ್ತು ಪರಿಸರ ಸಂಬಂಧಿ ವಿಷಯಗಳ ಕುರಿತು ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ, 2008 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಏಜೆನ್ಸಿ" ಯಲ್ಲಿ ಸಮುಚಿತ ಸರ್ಕಾರವು ನೇರವಾಗಿ ಅಥವಾ ಹೊರಗುತ್ತಿಗೆ ನೀಡುವ ಮೂಲಕ, ಅಂಕಿಅಂಶಗಳ ಸಂಗ್ರಹಣೆಗಾಗಿ ತೊಡಗಿಸಿರುವ ವ್ಯಕ್ತಿಯು ಒಳಗೊಳ್ಳುತ್ತಾನೆ ಅಥವಾ ವ್ಯಕ್ತಿಗಳು ಒಳಗೊಳ್ಳುತ್ತಾರೆ.

(ಬಿ) 3ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಹೊರಡಿಸಿದ ನಿರ್ದೇಶನದ ಮೇರೆಗೆ ಅಂಕಿಅಂಶಗಳ ಸಂಗ್ರಹಣೆಯ ಸಂಬಂಧದಲ್ಲಿ "ಸಮುಚಿತ ಸರ್ಕಾರ" ಎಂದರೆ,–

(i) ಕೇಂದ್ರ ಸರ್ಕಾರದ ಯಾವುದೇ ಮಂತ್ರಾಲಯ ಅಥವಾ ಇಲಾಖೆ; ಅಥವಾ

(ii) ರಾಜ್ಯ ಸರ್ಕಾರದ ಯಾವುದೇ ಮಂತ್ರಾಲಯ ಅಥವಾ ಇಲಾಖೆ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತ; ಅಥವಾ

(iii) ಯಾವುದೇ ಸ್ಥಳೀಯ ಸರ್ಕಾರ ಎಂದರೆ ಸಂದರ್ಭಾನುಸಾರ, ಪಂಚಾಯತಿಗಳು ಅಥವಾ ಪುರಸಭೆಗಳು;

(ಸಿ) "ಮಾಹಿತಿದಾರ" ಎಂದರೆ ಅಂಕಿಅಂಶ ಮಾಹಿತಿಯನ್ನು ಯಾರು ಒದಗಿಸುವನೋ ಅಥವಾ ಒದಗಿಸುವಂತೆ ಯಾರನ್ನು ಅಗತ್ಯಪಡಿಸಲಾಗಿದೆಯೋ ಆ ಯಾರೇ ವ್ಯಕ್ತಿ ಮತ್ತು ಭಾರತೀಯ ಪಾಲುಗಾರಿಕೆ ಅಧಿನಿಯಮ 1932 (1932ರ 9)ರ ಮೇರೆಗೆ ನೋಂದಾಯಿತವಾದ ವ್ಯಕ್ತಿಗಳ ಅಥವಾ ಫರ್ಮಿನ ಸಂಬಂಧದಲ್ಲಿ ಮಾಲೀಕನು ಅಥವಾ ಅಧಿಭೋಗದಾರನು ಅಥವಾ ಪ್ರಭಾರಿ ವ್ಯಕ್ತಿಯು ಅಥವಾ ಆತನ ಅಧಿಕೃತ ಪ್ರತಿನಿಧಿಯು ಒಳಗೊಳ್ಳುತ್ತಾನೆ ಅಥವಾ ಯಾವುದೇ ಸಹಕಾರಿ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಸಹಕಾರಿ ಸಂಘವು ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ ಮೇರೆಗೆ ನೋಂದಾಯಿತವಾದ ಕಂಪನಿಯು ಅಥವಾ ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಾಯಿತವಾದ ಸೊಸೈಟಿಯು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮಾನ್ಯತೆ ಪಡೆದ ಅಥವಾ ನೋಂದಾಯಿತವಾದ ಯಾವುದೇ ಸಂಘವು ಒಳಗೊಳ್ಳುತ್ತದೆ;

(ಡಿ) "ಮಾಹಿತಿ ಅನುಸೂಚಿ" ಎಂದರೆ ಈ ಅಧಿನಿಯಮದ ಮೇರೆಗೆ ಅಂಕಿಅಂಶಗಳ ಉದ್ದೇಶಗಳಿಗಾಗಿ ಯಾವುದರಲ್ಲಿ ಮಾಹಿತಿಯನ್ನು ನಮೂದಿಸಬೇಕಾಗಿದೆಯೋ ಅಥವಾ ದಾಖಲಿಸಬೇಕಾಗಿದೆಯೋ ಅಥವಾ ನಮೂದಿಸಲು ಅಥವಾ ದಾಖಲಿಸಲು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಪುಸ್ತಕ, ದಸ್ತಾವೇಜು, ನಮೂನೆ, ಕಾರ್ಡ್, ಟೇಪ್, ಡಿಸ್ಕ್ ಅಥವಾ ಯಾವುದೇ ಮಾಹಿತಿ ಸಂಗ್ರಹಣಾ ಸಾಧನಗಳು;

(ಇ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) "ಸ್ಯಾಂಪ್ಲಿಂಗ್" ಎಂದರೆ ಮಾಹಿತಿ ಕೋರುವ ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಮಾಹಿತಿಯನ್ನು ಯಾವ ಅಂಕಿಅಂಶ ಕಾರ್ಯವಿಧಾನದ ಮೂಲಕ ಮಾಹಿತಿ ಕೋರುವ ಕ್ಷೇತ್ರಕ್ಕೆ ಸುಸಂಗತವಾದ ಸಂಬಂಧಪಟ್ಟ ವ್ಯಕ್ತಿಗಳ ಅಥವಾ ಘಟಕಗಳ ಒಟ್ಟು ಸಂಖ್ಯೆಯ ಪ್ರಮಾಣಾನುಸಾರ ಪಡೆದ ಮಾಹಿತಿಗೆ ಅಂಕಿಅಂಶ ತಂತ್ರಗಳನ್ನು ಅನ್ವಯಿಸುವ ಮೂಲಕ ಪಡೆಯಲಾಯಿತೋ ಆ ಅಂಕಿಅಂಶ ಕಾರ್ಯವಿಧಾನ;

* ಜೂನ್ 9, 2010 ರಿಂದ ಜಾರಿಗೆ ಬಂದಿದೆ, ಭಾರತ ಸರ್ಕಾರದ ವಿಶೇಷ ಗೆಜೆಟ್‌ನ ಅಧಿಸೂಚನೆ ಸಂಖ್ಯೆ. ಎಸ್.ಓ 1416 (ಇ) ನೋಡಿ.

(ಜಿ) "ಅಂಕಿಅಂಶ ಸಮೀಕ್ಷೆ" ಎಂದರೆ ಯಾವ ಗಣತಿಯಿಂದ ಅಥವಾ ಸಮೀಕ್ಷೆಯಿಂದ ಈ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಸುಸಂಗತ ಅಧಿನಿಯಮದ ಮೇರೆಗೆ ಸಮುಚಿತ ಸರ್ಕಾರವು ಸಂಖ್ಯಾಶಾಸ್ತ್ರೀಯ ಕಾರ್ಯವಿಧಾನಗಳ ಮೂಲಕ ಪೂರ್ಣವಾಗಿ ಅಥವಾ ಪ್ರಧಾನವಾಗಿ ಸಂಸ್ಕರಿಸುವ ಮತ್ತು ಸಂಕ್ಷಿಪ್ತ ರೂಪಕ್ಕೆ ತರುವ ಉದ್ದೇಶಗಳಿಗಾಗಿ ಗಣತಿ ಅಥವಾ ಸಮೀಕ್ಷೆ ಸ್ಥಳದಲ್ಲಿನ ಎಲ್ಲಾ ಮಾಹಿತಿದಾರರಿಂದ ಕೇಳಿ ತಿಳಿದುಕೊಂಡು ಅಥವಾ ಅಲ್ಲಿ ಸಂಗ್ರಹಿಸಿದ ಸ್ಯಾಂಪಲ್‌ನಿಂದ ಮಾಹಿತಿಯನ್ನು ಸಂಗ್ರಹಿಸುತ್ತದೋ ಆ ಗಣತಿ ಅಥವಾ ಸಮೀಕ್ಷೆ;

(ಎಚ್) "ಅಂಕಿಅಂಶಗಳು" ಎಂದರೆ ಸಮುಚಿತ ಸರ್ಕಾರವು, ಯಾವ ಅಂಕಿಅಂಶ ಸಮೀಕ್ಷೆಗಳ, ಆಡಳಿತಾತ್ಮಕ ಮತ್ತು ನೋಂದಣಿ ದಾಖಲೆಗಳ ಮತ್ತು ಇತರ ನಮೂನೆಗಳ ಮತ್ತು ಕಾಗದ ಪತ್ರಗಳ ಅಂಕಿಅಂಶ ವಿಶ್ಲೇಷಣೆಯು ಪ್ರಕಟಿತ ರೂಪದಲ್ಲಿದೆಯೋ ಅಥವಾ ಅಪ್ರಕಟಿತ ರೂಪದಲ್ಲಿದೆಯೋ ಆ ಅಂಕಿಅಂಶ ಸಮೀಕ್ಷೆಗಳಿಂದ ಆಡಳಿತಾತ್ಮಕ ಮತ್ತು ನೋಂದಣಿ ದಾಖಲೆಗಳಿಂದ ಮತ್ತು ಇತರ ನಮೂನೆಗಳಿಂದ ಮತ್ತು ಕಾಗದಪತ್ರಗಳಿಂದ, ವಿಶೇಷವಾಗಿ ದೊಡ್ಡ ಪ್ರಮಾಣಗಳಲ್ಲಿ ಅಥವಾ ಸಂಖ್ಯೆಗಳಲ್ಲಿ ಅಥವಾ ದೊಡ್ಡ ಪ್ರಮಾಣಗಳಿಗಾಗಿ ಅಥವಾ ಸಂಖ್ಯೆಗಳಿಗಾಗಿ ಅಂಕಿ ಅಂಶವನ್ನು ಸಂಗ್ರಹಿಸುವ, ವರ್ಗೀಕರಿಸುವ ಮತ್ತು ಬಳಸಿಕೊಳ್ಳುವ ಮೂಲಕ ಪಡೆದ ಅಂಕಿಅಂಶಗಳು;

(ಐ) "ಅಂಕಿಅಂಶಗಳ ಅಧಿಕಾರಿ" ಎಂದರೆ ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ನೀಡಿದ ಯಾವುದೇ ನಿರ್ದೇಶನದ ಉದ್ದೇಶಗಳಿಗಾಗಿ 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಅಧಿಕಾರಿ.

## ಅಧ್ಯಾಯ– II

## ಅಂಕಿಅಂಶಗಳ ಸಂಗ್ರಹಣೆ

3. **ಅಂಕಿಅಂಶಗಳ ಸಂಗ್ರಹಣೆ.–** ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆರ್ಥಿಕ, ಜನಾಂಗಸ್ಥಿತಿ ವಿವರಣೆ, ಸಾಮಾಜಿಕ, ವೈಜ್ಞಾನಿಕ ಮತ್ತು ಪರಿಸರ ಸಂಬಂಧಿ ವಿಷಯಗಳ ಕುರಿತು ಅಂಕಿಅಂಶಗಳನ್ನು ಅಂಕಿಅಂಶ ಸಮೀಕ್ಷೆಯಿಂದ ಅಥವಾ ಅನ್ಯಥಾ ಸಂಗ್ರಹಿಸತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆನಂತರ ಆ ಅಂಕಿಅಂಶಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದು:

ಪರಂತು,–

(ಎ) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ–I ರಲ್ಲಿ (ಒಕ್ಕೂಟ ಪಟ್ಟಿ) ನಿರ್ದಿಷ್ಟಪಡಿಸಿರುವ ಯಾವುವೇ ನಮೂದುಗಳ ಅಡಿಯಲ್ಲಿ ಬರುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ಸಂಗ್ರಹಣೆಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವನ್ನು ನೀಡಲು ರಾಜ್ಯ ಸರ್ಕಾರಕ್ಕೆ ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತಕ್ಕೆ ಅಥವಾ ಯಾವುದೇ ಸ್ಥಳೀಯ ಆಡಳಿತಕ್ಕೆ ಅಧಿಕಾರ ನೀಡುತ್ತದೆಯೆಂದು ಭಾವಿಸತಕ್ಕದ್ದಲ್ಲ; ಅಥವಾ

(ಬಿ) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಂಕಿಅಂಶಗಳ ಸಂಗ್ರಹಣೆಗಾಗಿ ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಯಾವುದೇ ನಿರ್ದೇಶನವನ್ನು ಹೊರಡಿಸಿರುವಲ್ಲಿ, ಯಾವುದೇ ರಾಜ್ಯ ಸರ್ಕಾರವು ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತವು ಅಥವಾ ಯಾವುದೇ ಸ್ಥಳೀಯ ಆಡಳಿತವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದ ಹೊರತು, ಕೇಂದ್ರ ಸರ್ಕಾರದಿಂದ ಅಂಥ ಅಂಕಿಅಂಶಗಳ ಸಂಗ್ರಹಣೆಯ ಕಾರ್ಯ ಪೂರ್ಣಗೊಳ್ಳುವವರೆಗೆ ಅದೇ ರೀತಿಯ ಯಾವುದೇ ನಿರ್ದೇಶನವನ್ನು ಹೊರಡಿಸತಕ್ಕದ್ದಲ್ಲ; ಅಥವಾ

(ಸಿ) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಂಕಿಅಂಶಗಳ ಸಂಗ್ರಹಣೆಗಾಗಿ ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತವು ಅಥವಾ ಯಾವುದೇ ಸ್ಥಳೀಯ ಆಡಳಿತವು ಯಾವುದೇ ನಿರ್ದೇಶನವನ್ನು ಹೊರಡಿಸಿರುವಲ್ಲಿ ಅಂಥ ಅಂಕಿ ಅಂಶಗಳನ್ನು ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಅಥವಾ ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಬೇಕಾಗಿರುವ ಸಂದರ್ಭಗಳಲ್ಲಿ ಹೊರತು ರಾಜ್ಯ ಸರ್ಕಾರದಿಂದ ಅಂಕಿಅಂಶಗಳ ಸಂಗ್ರಹಣೆಯ ಕಾರ್ಯ ಪೂರ್ಣಗೊಳ್ಳುವವರೆಗೆ ಕೇಂದ್ರ ಸರ್ಕಾರವು ಅದೇ ರೀತಿಯ ಯಾವುದೇ ನಿರ್ದೇಶನವನ್ನು ಹೊರಡಿಸತಕ್ಕದ್ದಲ್ಲ.

4. **ಅಂಕಿಅಂಶಗಳ ಅಧಿಕಾರಿ, ಮುಂತಾದವರನ್ನು ನೇಮಕ ಮಾಡಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಸಂಗ್ರಹಿಸುವಂತೆ ತಾನು ನಿರ್ದೇಶಿಸಿದ ಯಾವುದೇ ಅಂಕಿ ಅಂಶಗಳನ್ನು ಸಂಗ್ರಹಿಸುವ ಉದ್ದೇಶಕ್ಕಾಗಿ ಯಾವುದೇ ಭೌಗೋಳಿಕ ಘಟಕಕ್ಕೆ ಅಂಕಿಅಂಶಗಳ ಅಧಿಕಾರಿಯಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು ಅಥವಾ ನೇಮಕ ಮಾಡಿಸಬಹುದು.

(2) ಸಮುಚಿತ ಸರ್ಕಾರವು, ನಿರ್ದಿಷ್ಟಪಡಿಸಿದ ಯಾವುದೇ ಭೌಗೋಳಿಕ ಘಟಕದೊಳಗೆ ಅಂಕಿಅಂಶಗಳನ್ನು ಸಂಗ್ರಹಿಸಲು ಅಥವಾ ಅಂಕಿಅಂಶ ಸಂಗ್ರಹಣೆಗೆ ನೆರವು ನೀಡಲು ಅಥವಾ ಅಂಕಿಅಂಶ ಸಂಗ್ರಹಣಾ ಕಾರ್ಯದ ಮೇಲ್ವಿಚಾರಣೆ ಮಾಡಲು ಯಾವುದೇ ಏಜೆನ್ಸಿಯನ್ನು ಅಥವಾ ಅಂಥ ಏಜೆನ್ಸಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳನ್ನು ನೇಮಕಮಾಡಬಹುದು ಮತ್ತು ಅಂಥ ಏಜೆನ್ಸಿಗಳು ಅಥವಾ ವ್ಯಕ್ತಿಗಳು, ಹಾಗೆ ನೇಮಕಗೊಂಡ ಮೇಲೆ ತದನುಸಾರವಾಗಿ ಸೇವೆ ಸಲ್ಲಿಸಲು ಬದ್ಧರಾಗಿರತಕ್ಕದ್ದು.

(3) ಸಮುಚಿತ ಸರ್ಕಾರವು, ಸಂಗ್ರಹಿಸುವಂತೆ ತಾನು ನಿರ್ದೇಶಿಸಿದ ಅಂಕಿಅಂಶಗಳನ್ನು ಸಂಗ್ರಹಿಸುವ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ಷರತ್ತುಗಳ ಮತ್ತು ನಿಬಂಧನೆಗಳ ಮೇಲೆ ಮತ್ತು ಅಂಥ ಸುರಕ್ಷತಾ ಷರತ್ತುಗಳ ಮೇಲೆ ಯಾವುದೇ ಏಜೆನ್ಸಿಯನ್ನು ಅಥವಾ ಕಂಪನಿಯನ್ನು ಅಥವಾ ಸಂಸ್ಥೆಯನ್ನು ಅಥವಾ ವ್ಯಕ್ತಿಗಳ ಸಂಘವನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಬಹುದು.

(4) ಸಮುಚಿತ ಸರ್ಕಾರವು, ಯಾರೇ ಅಂಕಿಅಂಶಗಳ ಅಧಿಕಾರಿಗೆ, ಅಂಥ ಸಾಂಖ್ಯಿಕ ಅಧಿಕಾರಿಯನ್ನು ಯಾವ ಭೌಗೋಳಿಕ ಘಟಕಕ್ಕೆ ನೇಮಕ ಮಾಡಲಾಗಿದೆಯೋ ಆ ಭೌಗೋಳಿಕ ಘಟಕದೊಳಗೆ, ಏಜೆನ್ಸಿಗಳನ್ನು ಅಥವಾ ಅಂಥ ಏಜೆನ್ಸಿಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಲು ಅಥವಾ ಯಾವುದೇ ಏಜೆನ್ಸಿಯನ್ನು ಅಥವಾ ಕಂಪನಿಯನ್ನು ಅಥವಾ ಸಂಸ್ಥೆಯನ್ನು ಅಥವಾ ವ್ಯಕ್ತಿಗಳ ಸಂಘವನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು (2)ನೇ ಮತ್ತು (3)ನೇ ಉಪ–ಪ್ರಕರಣಗಳ ಮೂಲಕ ತನಗೆ ಪ್ರದತ್ತವಾದ ಅಧಿಕಾರವನ್ನು ಅದು ಸೂಕ್ತವೆಂದು ಭಾವಿಸಬಹುದಾದಂತೆ ಪ್ರತ್ಯಾಯೋಜಿಸಬಹುದು.

(5) ಸಮುಚಿತ ಸರ್ಕಾರವು, ಮಾಹಿತಿದಾರರು ಅಂಕಿಅಂಶ ಮಾಹಿತಿಯನ್ನು ಯಾವ ನಮೂನೆಯಲ್ಲಿ ಸಲ್ಲಿಸಬೇಕು ಅದರಲ್ಲಿ ಯಾವ ಯಾವ ವಿವರಗಳು ಇರಬೇಕು ಅಥವಾ ಯಾವ ಮಧ್ಯಂತರಗಳಲ್ಲಿ ಮತ್ತು ಯಾವ ಅಂಕಿಅಂಶಗಳ ಅಧಿಕಾರಿಗೆ ಸಲ್ಲಿಸಬೇಕೆಂಬುದನ್ನು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದು.

(6) ಸಮುಚಿತ ಸರ್ಕಾರವು, 3ನೇ ಪ್ರಕರಣದ ಮೇರೆಗೆ ತಾನು ಹೊರಡಿಸಿದ ನಿರ್ದೇಶನದ ಮೇರೆಗೆ ಅಂಕಿಅಂಶಗಳ ಸಂಗ್ರಹಣೆ ಉದ್ದೇಶಕ್ಕಾಗಿ, (5)ನೇ ಉಪ–ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಯಾರೇ ಅಂಕಿಅಂಶಗಳ ಅಧಿಕಾರಿಗೆ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದು.

5. **ಮಾಹಿತಿ ಕೇಳಲು ಸಾಂಖ್ಯಿಕ ಅಧಿಕಾರಿಯ ಅಧಿಕಾರ.–** ಅಂಕಿಅಂಶಗಳ ಅಧಿಕಾರಿಯು, ಅವನನ್ನು ಯಾವ ಭೌಗೋಳಿಕ ಘಟಕಕ್ಕೆ ನೇಮಕ ಮಾಡಲಾಗಿದೆಯೋ ಆ ಯಾವುದೇ ಭೌಗೋಳಿಕ ಘಟಕದಲ್ಲಿನ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಅಂಕಿಅಂಶಗಳ ಸಂಗ್ರಹಣೆಯ ಉದ್ದೇಶಕ್ಕಾಗಿ,–

(ಎ) 4ನೇ ಪ್ರಕರಣದ (5)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಾಹಿತಿಯನ್ನು ಒದಗಿಸುವಂತೆ ಯಾರೇ ಮಾಹಿತಿದಾರನನ್ನು ಕೇಳಿ ಲಿಖಿತ ನೋಟೀಸನ್ನು ಅವನಿಗೆ ಜಾರಿ ಮಾಡಬಹುದು ಅಥವಾ ಜಾರಿಮಾಡಿಸಬಹುದು ಅಥವಾ ಮಾಹಿತಿ ಅನುಸೂಚಿಯನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಅದನ್ನು ಯಾರೇ ಮಾಹಿತಿದಾರನಿಗೆ ಕೊಡಿಸಬಹುದು; ಅಥವಾ

(ಬಿ) ಯಾರೇ ಮಾಹಿತಿದಾರನಿಂದ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ಕೇಳಿಸಬಹುದು; ಅಥವಾ

(ಸಿ) ಟೆಲಿ ಫ್ಯಾಕ್ಸ್ ಅಥವಾ ದೂರವಾಣಿ ಅಥವಾ ಇ–ಮೇಲ್ ಮೂಲಕ ಅಥವಾ ಯಾವುದೇ ಇತರ ವಿದ್ಯುನ್ಮಾನ ವಿಧಾನದಲ್ಲಿ ಅಥವಾ ಹಾಗೆ ನಿರ್ದಿಷ್ಟಪಡಿಸಿದ ಮಾಹಿತಿಯ ಬೇರೆಬೇರೆ ಸೆಟ್‌ಗಳಿಗಾಗಿ ಬೇರೆ ಬೇರೆ ವಿಧಾನಗಳ ಸಂಯೋಜನೆ ರೂಪದಲ್ಲಿ ಮಾಹಿತಿಯನ್ನು ಕೋರಬಹುದು.

6. **ಮಾಹಿತಿದಾರರ ಕರ್ತವ್ಯ.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಮಾಹಿತಿಯನ್ನು ಒದಗಿಸಲು ಯಾವ ಮಾಹಿತಿದಾರರನ್ನು ಕೋರಲಾಗಿದೆಯೋ ಆ ಮಾಹಿತಿದಾರರು, ಹಾಗೆ ಕೋರಿದ ಮಾಹಿತಿಯನ್ನು ತಮಗೆ ತಿಳಿದಿರುವಷ್ಟರ ಮಟ್ಟಿಗೆ ಅಥವಾ ನಂಬುವಷ್ಟರ ಮಟ್ಟಿಗೆ ನಿಯಮಿಸಿದ ರೀತಿಯಲ್ಲಿ ಒದಗಿಸಲು ಬದ್ಧರಾಗಿರತಕ್ಕದ್ದು; ಮತ್ತು ಯಾವುದೇ ಸ್ಯಾಂಪ್ಲಿಂಗ್ ಪ್ರಕ್ರಿಯೆ ಕಾರಣದಿಂದಾಗಿ ವ್ಯಕ್ತಿಗಳ ಅಥವಾ ಘಟಕಗಳ ನಿರ್ದಿಷ್ಟ ವರ್ಗದ ಅಥವಾ ಗುಂಪಿನ ಒಂದು ಭಾಗವು ಮಾತ್ರ ಮಾಹಿತಿಯನ್ನು ಒದಗಿಸುವಂತೆ ಕೋರಿರುವ ಪ್ರಕರಣಗಳಲ್ಲಿ ಹಾಗೆ ಕೋರಿರುವ ಮಾಹಿತಿಯನ್ನು ಒದಗಿಸಲು ಯಾರೇ ಮಾಹಿತಿದಾರನು ವಿಫಲನಾದಲ್ಲಿ ಅದು ಅವನಿಗೆ ಪ್ರತಿರಕ್ಷೆಯಾಗತಕ್ಕದ್ದಲ್ಲ.

7. **ಎಲ್ಲಾ ಏಜೆನ್ಸಿಗಳು ನೆರವು ನೀಡುವುದು.–** ಪ್ರತಿಯೊಂದು ಏಜೆನ್ಸಿಯು, ಅಂಕಿಅಂಶಗಳ ಅಧಿಕಾರಿಗೆ ಅಥವಾ ಆತನು ಲಿಖಿತದಲ್ಲಿ ಅಧಿಕೃತಗೊಳಿಸಿದ ವ್ಯಕ್ತಿಗೆ ಅಥವಾ ಏಜೆನ್ಸಿಗೆ, ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಅವನು ಅಗತ್ಯಪಡಿಸಬಹುದಾದಂಥ ಸಹಾಯವನ್ನು ಮತ್ತು ನೆರವನ್ನು ನೀಡತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ಅವಶ್ಯಕವಾಗಬಹುದಾದಂಥ ದಾಖಲೆಗಳನ್ನು, ನಕ್ಷೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಪರಿವೀಕ್ಷಣೆಗೆ ಮತ್ತು ಪರಿಶೀಲನೆಗೆ ಲಭ್ಯವಾಗುವಂತೆ ಮಾಡತಕ್ಕದ್ದು.

8. **ದಾಖಲೆಗಳನ್ನು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಲು ಹಕ್ಕು.–** ಅಂಕಿಅಂಶಗಳ ಅಧಿಕಾರಿಗೆ ಅಥವಾ ಈ ಬಗ್ಗೆ ಲಿಖಿತದಲ್ಲಿ ಆತನಿಂದ ಅಧಿಕೃತನಾದ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಮೇರೆಗೆ ಯಾವುದೇ ಅಂಕಿ ಅಂಶಗಳನ್ನು ಸಂಗ್ರಹಿಸುವ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಿರುವ ಯಾರೇ ಮಾಹಿತಿದಾರನ ಸ್ವಾಧೀನದಲ್ಲಿರುವ ಯಾವುದೇ ಸಂಬಂಧಪಟ್ಟ ದಾಖಲೆಯನ್ನು ಅಥವಾ ದಸ್ತಾವೇಜನ್ನು ಪರಿಶೀಲಿಸಲು ಅವಕಾಶವಿರತಕ್ಕ ಮತ್ತು ಅಂಥ ದಾಖಲೆಯನ್ನು ಅಥವಾ ದಸ್ತಾವೇಜನ್ನು ಯಾವ ಆವರಣದಲ್ಲಿ ಇಡಲಾಗಿದೆ ಎಂದು ಅವನು ನಂಬುವನೋ ಆ ಯಾವುದೇ ಆವರಣವನ್ನು ಯಾವುದೇ ಯುಕ್ತ ಸಮಯದಲ್ಲಿ ಅವನು ಪ್ರವೇಶಿಸಬಹುದು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸಬಹುದು ಅಥವಾ ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು ಅಥವಾ ಈ ಅಧಿನಿಯಮದ ಮೇರೆಗೆ ಒದಗಿಸಲು ಅಗತ್ಯಪಡಿಸಿರುವ ಯಾವುದೇ ಮಾಹಿತಿಯನ್ನು ಪಡೆಯುವುದಕ್ಕಾಗಿ ಅವಶ್ಯಕವಾದ ಯಾವುದೇ ಪ್ರಶ್ನೆಯನ್ನು ಕೇಳಬಹುದು.

## ಅಧ್ಯಾಯ – III

### ಕೆಲವು ಪ್ರಕರಣಗಳಲ್ಲಿ ಮಾಹಿತಿಯನ್ನು ಬಹಿರಂಗಪಡಿಸುವುದು ಮತ್ತು ಮಾಹಿತಿ ಬಳಕೆಯ ಮೇಲೆ ನಿರ್ಬಂಧಗಳು

9. **ಮಾಹಿತಿಯ ಸುರಕ್ಷೆ.–** (1) ಅಂಕಿಅಂಶಗಳ ಅಧಿಕಾರಿಗೆ ಅಥವಾ ಈ ಅಧಿನಿಯಮದ ಮೇರೆಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಅಥವಾ ಏಜೆನ್ಸಿಗಳಿಗೆ ಒದಗಿಸಿದ ಯಾವುದೇ ಮಾಹಿತಿಯನ್ನು ಅಂಕಿಅಂಶಗಳ ಉದ್ದೇಶಗಳಿಗಾಗಿ ಮಾತ್ರ ಬಳಸಿಕೊಳ್ಳತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಅಂಕಿಅಂಶಗಳ ಸಂಗ್ರಹಣೆಯ ಅಥವಾ ಅಂಥ ಸಂಗ್ರಹಣೆಯಿಂದ ಒದಗಿದ ಅಂಕಿಅಂಶಗಳನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನ್ ಉದ್ದೇಶಗಳಿಗಾಗಿ ಹೊರತು, ಯಾವುದೇ ಮಾಹಿತಿ ಅನುಸೂಚಿಯನ್ನು ಅಥವಾ ಕೇಳಲಾದ ಪ್ರಶ್ನೆಗೆ ನೀಡಿದ ಯಾವುದೇ ಉತ್ತರವನ್ನು ನೋಡಲು ಅನುಮತಿ ನೀಡತಕ್ಕದ್ದಲ್ಲ.

(3) ಯಾವುದೇ ಮಾಹಿತಿ ಅನುಸೂಚಿಯಲ್ಲಿ ಒಳಗೊಂಡಿರುವ ಯಾವುದೇ ಮಾಹಿತಿಯನ್ನು ಮತ್ತು ಕೇಳಲಾದ ಪ್ರಶ್ನೆಗೆ ನೀಡಿದ ಯಾವುದೇ ಉತ್ತರವನ್ನು ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನ್ ಉದ್ದೇಶಕ್ಕಾಗಿ ಹೊರತು, ಪ್ರತ್ಯೇಕವಾಗಿ ಪ್ರಕಟಿಸತಕ್ಕದ್ದಲ್ಲ ಅಥವಾ ಯಾವುದೇ ಏಜೆನ್ಸಿಗೆ ಮಾಹಿತಿದಾರರ ಗುರುತನ್ನು ಮರೆಮಾಚದೆ ಬಹಿರಂಗಪಡಿಸತಕ್ಕದ್ದಲ್ಲ.

(4) ಯಾವುದೇ ಏಜೆನ್ಸಿಯು ಪ್ರಕಟಿಸಿದ ಎಲ್ಲಾ ಅಂಕಿಅಂಶ ಮಾಹಿತಿಯನ್ನು, ಯಾವುದೇ ವಿವರಗಳನ್ನು, ಮಾಹಿತಿಯನ್ನು ಒದಗಿಸಿದ ಮಾಹಿತಿದಾರನಿಗೆ ಸಂಬಂಧಿಸಿದ ವಿವರಗಳೆಂಬಂತೆ, ತೆಗೆದುಹಾಕುವ ಪ್ರಕ್ರಿಯೆಯ ಮೂಲಕವೂ ಸಹ ಯಾರೇ ವ್ಯಕ್ತಿಯು (ಆ ವಿವರಗಳನ್ನು ಒದಗಿಸಿದ ಮಾಹಿತಿದಾರನನ್ನು ಹೊರತುಪಡಿಸಿ) ಗುರುತಿಸಲು ಸಾಧ್ಯವಾಗದಂಥ ರೀತಿಯಲ್ಲಿ,–

(ಎ) ಆ ರೀತಿಯಲ್ಲಿ ಅವುಗಳನ್ನು ಪ್ರಕಟಿಸುವುದಕ್ಕೆ ಮಾಹಿತಿದಾರನು ಸಮ್ಮತಿಸಿದ ಹೊರತು; ಅಥವಾ

(ಬಿ) ಆ ರೀತಿಯಲ್ಲಿ ಅವು ಪ್ರಕಟಣೆಯಾಗುವುದನ್ನು, ಸಂಬಂಧಿಸಿದ ಏಜೆನ್ಸಿಯು ಅಥವಾ ಅದರ ಯಾರೇ ನೌಕರನು ಸಮಂಜಸವಾಗಿ ಮುಂಗಾಣಲಾಗದಂತಿದ್ದ ಹೊರತು

– ವ್ಯವಸ್ಥೆ ಮಾಡತಕ್ಕದ್ದು.

(5) ಉಪ–ಪ್ರಕರಣ (4)ರ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು ಅದು ಅವಶ್ಯಕವೆಂದು ಪರ್ಯಾಲೋಚಿಸಬಹುದಾದಂಥ ನಿಯಮಗಳನ್ನು ರಚಿಸಬಹುದು ಅಥವಾ ಅಂಥ ವ್ಯವಸ್ಥೆಗಳನ್ನು ಮಾಡಬಹುದು.

**10. ಕೆಲವು ಮಾಹಿತಿಯನ್ನು ಬಹಿರಂಗಪಡಿಸಲು ಸಮುಚಿತ ಸರ್ಕಾರಕ್ಕೆ ಅಧಿಕಾರ ಇರುವುದು.–** ಈ ಅಧಿನಿಯಮದ 9ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ ಸಮುಚಿತ ಸರ್ಕಾರವು ಈ ಮುಂದಿನ ಮಾಹಿತಿಯನ್ನು ಬಹಿರಂಗಪಡಿಸಬಹುದು ಎಂದರೆ,–

(ಎ) ಮಾಹಿತಿದಾರನು ಒದಗಿಸಿದ ಯಾವ ಮಾಹಿತಿಯನ್ನು ಬಹಿರಂಗಪಡಿಸಲು ಮಾಹಿತಿದಾರನು ಅಥವಾ ಸದರಿ ಮಾಹಿತಿದಾರನಿಂದ ಅಧಿಕಾರ ಪಡೆದ ಯಾರೇ ವ್ಯಕ್ತಿಯು ಲಿಖಿತದಲ್ಲಿ ಸಮ್ಮತಿ ನೀಡಿದ್ದಾನೋ ಆ ಮಾಹಿತಿ;

(ಬಿ) ಯಾವುದೇ ಅಧಿನಿಯಮದ ಮೇರೆಗೆ ಅಥವಾ ಸಾರ್ವಜನಿಕ ದಸ್ತಾವೇಜಾಗಿ ಸಾರ್ವಜನಿಕರಿಗೆ ಅನ್ಯಥಾ ಲಭ್ಯವಾಗಬಹುದಾದ ಮಾಹಿತಿ;

(ಸಿ) ವಿಷಯ ಸೂಚಿ ರೂಪದಲ್ಲಿರುವ ಅಥವಾ ಮಾಹಿತಿದಾರರಿಗೆ ವರ್ಗೀಕರಣವನ್ನು ಏನಾದರೂ ನೀಡಿದ್ದರೆ, ಆ ವರ್ಗೀಕರಣ ಮತ್ತು ಈ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿಗಳ ಸಂಖ್ಯೆಯೊಂದಿಗೆ ಮಾಹಿತಿದಾರರ ಹೆಸರು ಮತ್ತು ವಿಳಾಸಗಳ ಪಟ್ಟಿಯ ರೂಪದಲ್ಲಿರುವ ಮಾಹಿತಿ.

**11. ಸದ್ಭಾವನಾಪೂರ್ವಕ ಅಥವಾ ಅಂಕಿಅಂಶ ಉದ್ದೇಶಗಳಿಗಾಗಿ ಮಾಹಿತಿ ಸೂಚಿಗಳನ್ನು ಬಹಿರಂಗಪಡಿಸುವುದು.–** (1) ಸಮುಚಿತ ಸರ್ಕಾರವು, ಈ ಅಧಿನಿಯಮದ 9ನೇ ಪ್ರಕರಣದಲ್ಲಿ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ತಮ್ಮ ತಮ್ಮ ಪ್ರಕಾರ್ಯಗಳಿಗೆ ಮತ್ತು ಕರ್ತವ್ಯಗಳಿಗೆ ಅನುಸಾರವಾಗಿ ಸದ್ಭಾವನಾಪೂರ್ವಕ ಸಂಶೋಧನೆಯ ಅಥವಾ ಅಂಕಿಅಂಶ ಉದ್ದೇಶಗಳಿಗಾಗಿ ಮಾತ್ರವೇ ಇತರ ಏಜೆನ್ಸಿಗೆ ಅಥವಾ ವ್ಯಕ್ತಿಗೆ ಅಥವಾ ಸಂಸ್ಥೆಗಳಿಗೆ ಅಥವಾ ವಿಶ್ವವಿದ್ಯಾಲಯಗಳಿಗೆ ವೈಯಕ್ತಿಕ ವಿವರಪಟ್ಟಿಕೆಗಳನ್ನು ಅಥವಾ ನಿದರ್ಶನ ನಮೂನೆಗಳನ್ನು ಅಥವಾ ಮಾಹಿತಿ ಅನುಸೂಚಿಗಳನ್ನು ತಿಳಿಯಪಡಿಸಬಹುದು.

(2) ಈ ಪ್ರಕರಣಕ್ಕನುಸಾರವಾಗಿ ಯಾವುದೇ ವೈಯಕ್ತಿಕ ವಿವರ ಪಟ್ಟಿಕೆಯನ್ನು ಅಥವಾ ಮಾಹಿತಿ ಸೂಚಿಯನ್ನು,–

(ಎ) ಯಾವ ಮಾಹಿತಿದಾರನು ಮಾಹಿತಿ ಅನುಸೂಚಿಯನ್ನು ಅಥವಾ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಿದ್ದನೋ ಆ ಮಾಹಿತಿದಾರನ ಹೆಸರು ಮತ್ತು ವಿಳಾಸವನ್ನು ತೆಗೆದುಹಾಕಿದ ಹೊರತು;

(ಬಿ) ಸಂಶೋಧನೆಯಲ್ಲಿ ಅಥವಾ ಅಂಕಿಅಂಶ ಪ್ರಾಜೆಕ್ಟ್‌ನಲ್ಲಿ ತೊಡಗಿರುವ ಪ್ರತಿಯೊಂದು ಏಜೆನ್ಸಿಯು ಅಥವಾ ವ್ಯಕ್ತಿಯು ಅಥವಾ ಸಂಸ್ಥೆಗಳು ಅಥವಾ ವಿಶ್ವವಿದ್ಯಾಲಯಗಳು ಅವುಗಳಿಗೆ ತಿಳಿಯಪಡಿಸಿದ ಮಾಹಿತಿ ಅನುಸೂಚಿಗಳನ್ನು ಸದ್ಭಾವನಾಪೂರ್ವಕ ಸಂಶೋಧನೆಗೆ ಅಥವಾ ಅಂಕಿಅಂಶ ಉದ್ದೇಶಗಳಿಗಾಗಿ ಮಾತ್ರವೇ ಬಳಸಿಕೊಳ್ಳುವುದಾಗಿ ಘೋಷಣೆಯನ್ನು ಮಾಡಿದ ಹೊರತು;

(ಸಿ) ಹಾಗೆ ತಿಳಿಯಪಡಿಸುವ ಸಮುಚಿತ ಸರ್ಕಾರಕ್ಕೆ, ಮಾಹಿತಿ ಅನುಸೂಚಿಗಳ ಸುರಕ್ಷೆಗೆ ಮತ್ತು ಅವುಗಳಲ್ಲಿ ಒಳಗೊಂಡಿರುವ ಯಾವುದೇ ಮಾಹಿತಿಗೆ ಧಕ್ಕೆಯುಂಟಾಗುವುದಿಲ್ಲವೆಂದು ಮನದಟ್ಟಾದ ಹೊರತು

– ತಿಳಿಯಪಡಿಸತಕ್ಕದ್ದಲ್ಲ.

(3) ಯಾವುದೇ ಸಂಶೋಧನೆಯ ಅಥವಾ ಅಂಕಿಅಂಶ ಪ್ರಾಜೆಕ್ಟ್‌ನ ಪ್ರಕಟಿತ ಫಲಿತಾಂಶಗಳ ಅಂಕಿಅಂಶಗಳ ಸಂಗ್ರಹಣೆಗಾಗಿ ಅಧಿಕೃತಗೊಂಡ ಏಜೆನ್ಸಿಯು ಈ ಅಧಿನಿಯಮದ ಮೇರೆಗೆ ಪ್ರಕಟಿಸಬಹುದಾದಕ್ಕಿಂತಲೂ ಯಾವುದೇ ಹೆಚ್ಚಿನ ಮಾಹಿತಿಯನ್ನು ಹೊರಗೆಡವತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಯಾವುದೇ ವೈಯಕ್ತಿಕ ವಿವರ ಪಟ್ಟಿಕೆಯನ್ನು ಅಥವಾ ಮಾಹಿತಿ ಅನುಸೂಚಿಯನ್ನು ಯಾವ ಏಜೆನ್ಸಿಗೆ ಅಥವಾ ವ್ಯಕ್ತಿಗೆ ಅಥವಾ ಸಂಸ್ಥೆಗಳಿಗೆ ಅಥವಾ ವಿಶ್ವವಿದ್ಯಾಲಯಗಳಿಗೆ ಬಹಿರಂಗಪಡಿಸಲಾಗಿದೆಯೋ, ಆ ಪ್ರತಿಯೊಂದು ಏಜೆನ್ಸಿಯು ಅಥವಾ ಪ್ರತಿಯೊಬ್ಬ ವ್ಯಕ್ತಿಯು ಅಥವಾ ಸಂಸ್ಥೆಗಳು ಅಥವಾ ವಿಶ್ವವಿದ್ಯಾನಿಲಯಗಳು, ಮಾಹಿತಿ

ಅನುಸೂಚಿಗಳಿಗೆ ಮತ್ತು ಅವುಗಳಲ್ಲಿ ಒಳಗೊಂಡಿರುವ ಯಾವುದೇ ಮಾಹಿತಿಗೆ ಸಂಬಂಧಪಟ್ಟಂತೆ ಬಹಿರಂಗಪಡಿಸುವ, ಅಂಕಿಅಂಶಗಳ ಸಂಗ್ರಹಣೆಗಾಗಿ ಅಧಿಕೃತ ಏಜೆನ್ಸಿಯು ನೀಡಿದ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

12. **ಐತಿಹಾಸಿಕ ದಸ್ತಾವೇಜುಗಳನ್ನು ಬಹಿರಂಗಪಡಿಸುವುದು.–** ಈ ಅಧಿನಿಯಮದ 9ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಮುಚಿತ ಸರ್ಕಾರವು, ಯಾವ ಮಾಹಿತಿ ಅನುಸೂಚಿಗಳು ಐತಿಹಾಸಿಕ ಮಹತ್ವ ಹೊಂದಿವೆ ಎಂದು ಅದು ಅಭಿಪ್ರಾಯಪಡುವುದೋ ಆ ಮಾಹಿತಿ ಸೂಚಿಗಳಿಗೆ ಸಂಬಂಧಿಸಿದಂಥ ದಸ್ತಾವೇಜುಗಳನ್ನು ಬಿಡುಗಡೆ ಮಾಡಬಹುದು.

13. **ದಾಖಲಿಸಿಕೊಂಡ ಮಾಹಿತಿಯ ಸುರಕ್ಷೆ.–** ಅಂಕಿಅಂಶಗಳ ಅಧಿಕಾರಿಯು ಅಥವಾ ಅಂಕಿಅಂಶ ಸಂಗ್ರಹಣೆಗಾಗಿ ಅಧಿಕೃತಗೊಂಡ ಯಾರೇ ವ್ಯಕ್ತಿಯು ಅಥವಾ ಏಜೆನ್ಸಿಯು, ವೈಯಕ್ತಿಕ ವಿವರಪಟ್ಟಿಕೆಗಳಿಂದ, ಮಾಹಿತಿ ಅನುಸೂಚಿಗಳಿಂದ, ವರ್ಕ್‌ಶೀಟ್‌ಗಳಿಂದ ಅಥವಾ ಯಾವುದೇ ಇತರ ರಹಸ್ಯಮೂಲದಿಂದ, ಕಾರ್ಡ್‌ಗಳ, ಟೇಪ್‌ಗಳ, ಡಿಸ್ಕ್‌ಗಳ, ಫಿಲ್ಮಿನ ಅಥವಾ ಇತರ ಯಾವುದೇ ವಿಧಾನದ ಮೂಲಕ, ಈ ಅಧಿನಿಯಮದ ಮೇರೆಗೆ ಅನುಸಾರವಾಗಿ ಸಂಗ್ರಹಿಸಲಾದ ಯಾವುದೇ ಅಂಕಿಅಂಶ ಮಾಹಿತಿಯನ್ನು, ವಿವರಗಳ ಸಂಸ್ಕರಣೆಗಾಗಿ, ಸಂಗ್ರಹಣೆಗಾಗಿ ಅಥವಾ ಪುನರ್ ಸೃಷ್ಟಿಗಾಗಿ ಸಂಕೇತ ಭಾಷೆಯನ್ನು ಬಳಸಿಯಾಗಲಿ ಅಥವಾ ಗೂಢಲಿಪಿ ಚಿಹ್ನೆಗಳನ್ನು ಬಳಸಿ ಅಥವಾ ರೂಢಿಲಿಪಿ ಚಿಹ್ನೆಗಳನ್ನು ಬಳಸಿ ಪ್ರತಿ ಮಾಡುವಾಗ ಅಥವಾ ದಾಖಲಿಸುವಾಗ, ಈ ಅಧಿನಿಯಮದ ಸುರಕ್ಷಾ ಉಪಬಂಧಗಳನ್ನು ಪಾಲಿಸಲಾಗಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಅವಶ್ಯಕವಾದಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಕೈಗೊಳ್ಳುವಂತೆ ಮಾಡತಕ್ಕದ್ದು.

14. **ಮಾಹಿತಿಯ ಬಳಕೆ ಮೇಲೆ ನಿರ್ಬಂಧಗಳು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಹೊರತು,–

(ಎ) ಈ ಅಧಿನಿಯಮಕ್ಕನುಸಾರವಾಗಿ ಪಡೆದ ಯಾವುದೇ ಮಾಹಿತಿಯನ್ನು ಮತ್ತು ಯಾರೇ ಮಾಹಿತಿದಾರನ ಸ್ವಾಧೀನದಲ್ಲಿರುವ ಮಾಹಿತಿಯ ಯಾವುದೇ ಪ್ರತಿಯನ್ನು ಬಹಿರಂಗಪಡಿಸತಕ್ಕದ್ದಲ್ಲ ಅಥವಾ ಯಾವುದೇ ರೀತಿಯ ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿ ಬಳಸಿಕೊಳ್ಳತಕ್ಕದ್ದಲ್ಲ; ಮತ್ತು

(ಬಿ) ಯಾವ ವ್ಯಕ್ತಿಯು ಯಾವುದೇ ಅಂಕಿಅಂಶ ಸಂಗ್ರಹಣೆಯಲ್ಲಿ ತನ್ನ ಹುದ್ದೆಯ ಬಲದಿಂದ ಯಾವುದೇ ಮಾಹಿತಿಯನ್ನು ಪರಿಶೀಲಿಸುವ ಅವಕಾಶವನ್ನು ಹೊಂದಿರುವನೋ ಆ ಯಾರೇ ವ್ಯಕ್ತಿಯನ್ನು ಯಾವುದೇ ರೀತಿಯ ವ್ಯವಹರಣೆಗಳಲ್ಲಿ, ಆ ಮಾಹಿತಿಗೆ ಸಂಬಂಧಿಸಿದಂತೆ ಮೌಖಿಕ ಸಾಕ್ಷ್ಯವನ್ನು ನೀಡುವಂತೆ ಅಥವಾ ಈ ಅಧಿನಿಯಮಕ್ಕನುಸಾರವಾಗಿ ಕಾರ್ಯನಿರ್ವಹಿಸುವಾಗ ಪಡೆದ ಯಾವುದೇ ಮಾಹಿತಿಗೆ ಸಂಬಂಧಿಸಿದ ಯಾವುದೇ ಅನುಸೂಚಿಯನ್ನು, ದಸ್ತಾವೇಜನ್ನು ಅಥವಾ ದಾಖಲೆಯನ್ನು ಹಾಜರುಪಡಿಸುವಂತೆ ಒತ್ತಾಯಿಸತಕ್ಕದ್ದಲ್ಲ.

## ಅಧ್ಯಾಯ–IV

## ಅಪರಾಧಗಳು ಮತ್ತು ದಂಡನೆಗಳು

15. **ವಿವರಗಳನ್ನು ಒದಗಿಸಲು ನಿರ್ಲಕ್ಷಿಸಿದಕ್ಕಾಗಿ ಅಥವಾ ನಿರಾಕರಿಸಿದಕ್ಕಾಗಿ ದಂಡನೆ.–** (1) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಥವಾ ಅವುಗಳ ಉದ್ದೇಶಗಳಿಗಾಗಿ ಅಗತ್ಯಪಡಿಸಬಹುದಾದಂತೆ ಯಾರೇ ಆಗಲಿ, ಯಾವುದೇ ಲೆಕ್ಕಪತ್ರ ಪುಸ್ತಕಗಳನ್ನು, ವೋಚರ್‌ಗಳನ್ನು, ದಸ್ತಾವೇಜುಗಳನ್ನು ಅಥವಾ ಇತರ ವ್ಯವಹಾರ ದಾಖಲೆಗಳನ್ನು ಹಾಜರುಪಡಿಸಲು ವಿಫಲನಾದರೆ ಅಥವಾ ಯಾರೇ ಆಗಲಿ, ಅವನಿಗೆ ನೀಡಿದ ಅಥವಾ ಕಳುಹಿಸಿದ ಯಾವುದೇ ಮಾಹಿತಿ ಅನುಸೂಚಿಯಲ್ಲಿ ಅಥವಾ ವಿವರಪಟ್ಟಿಕೆಯಲ್ಲಿ ಅಗತ್ಯಪಡಿಸಿರುವ ವಿವರಗಳನ್ನು ಭರ್ತಿ ಮಾಡಲು ಮತ್ತು ಒದಗಿಸಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ ಅಥವಾ ಯಾರೇ ಆಗಲಿ ಅವನಿಗೆ ಕೇಳಿದ ಯಾವುದೇ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರೆ ಅಥವಾ ವಿಚಾರಣೆಯನ್ನು ನಿರ್ಲಕ್ಷಿಸಿದರೆ ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ಒಂದು ಅಪರಾಧಕ್ಕಾಗಿ ವ್ಯಕ್ತಿಯನ್ನು ಅಥವಾ ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ ಅದು (1)ನೇ ಉಪ–ಪ್ರಕರಣದ ಮೇರೆಗಿನ ಬಾಧ್ಯತೆಗಳಿಂದ ಅವನನ್ನು ಅಥವಾ ಅದನ್ನು ಮುಕ್ತಗೊಳಿಸತಕ್ಕದ್ದಲ್ಲ ಮತ್ತು ಅಪರಾಧ ನಿರ್ಣಯದ ದಿನಾಂಕದಿಂದ ಹದಿನಾಲ್ಕು ದಿವಸಗಳ ಮುಕ್ತಾಯದ ತರುವಾಯವೂ ಅವನು ಅಥವಾ ಅದು ಅಗತ್ಯ ವಿವರಗಳನ್ನು ನೀಡಲು ವಿಫಲವಾದರೆ ಅಥವಾ ವಿವರಗಳನ್ನು ಭರ್ತಿ ಮಾಡಲು ಮತ್ತು ಒದಗಿಸಲು ಅಥವಾ ವಿಚಾರಣೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುವುದನ್ನು, ನಿರ್ಲಕ್ಷಿಸುವುದನ್ನು ಅಥವಾ ನಿರಾಕರಿಸುವುದನ್ನು ಮುಂದುವರಿಸಿದರೆ ಅವನು ಅಥವಾ ಕಂಪನಿಯು ವಿಫಲತೆ ಮುಂದುವರಿದ ಮೊದಲ ಅವಧಿಯ ತರುವಾಯ ಪ್ರತಿಯೊಂದು ದಿನಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ಅಥವಾ ಕಂಪನಿಯ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

16. **ಸುಳ್ಳು ಹೇಳಿಕೆ ನೀಡಿದ್ದಕ್ಕೆ ದಂಡನೆ.–** ಯಾರೇ ಆಗಲಿ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಭರ್ತಿ ಮಾಡಿದ ಅಥವಾ ಒದಗಿಸಿದ ಯಾವುದೇ ಮಾಹಿತಿ ಅನುಸೂಚಿಯಲ್ಲಿ ಅಥವಾ ವಿವರಪಟ್ಟಿಕೆಯಲ್ಲಿ ಅಥವಾ ಅವನಿಗೆ ಕೇಳಿದ ಯಾವುದೇ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಉದ್ದೇಶಪೂರ್ವಕವಾಗಿ ಯಾವುದೇ ಸುಳ್ಳು ಹೇಳಿಕೆಯನ್ನು ಅಥವಾ ತಪ್ಪುದಾರಿಗೆಳೆಯುವ ಹೇಳಿಕೆಯನ್ನು ನೀಡಿದರೆ ಅಥವಾ ಮಹತ್ವದ ಅಂಶಗಳನ್ನು ಬಿಟ್ಟುಬಿಟ್ಟಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**17. ಮಾಹಿತಿ ಸೂಚಿಯನ್ನು ಹಾಳು ಮಾಡುವುದಕ್ಕೆ ಅಥವಾ ವಿರೂಪಗೊಳಿಸುವುದಕ್ಕೆ ದಂಡನೆ.–** ಯಾರೇ ಆಗಲಿ, ಯಾವುದೇ ಮಾಹಿತಿ ಅನುಸೂಚಿಯನ್ನು, ನಮೂನೆಯನ್ನು ಅಥವಾ ಈ ಅಧಿನಿಯಮದ ಮೇರೆಗೆ ಸಂಗ್ರಹಿಸಿದ ವಿವರಗಳನ್ನು ಒಳಗೊಂಡಿರುವ ಅಥವಾ ಕೋರಿರುವ ಯಾವುದೇ ಇತರ ದಸ್ತಾವೇಜನ್ನು ನಾಶಪಡಿಸಿದರೆ, ವಿರೂಪಗೊಳಿಸಿದರೆ, ತೆಗೆದುಹಾಕಿದರೆ ಅಥವಾ ಹಾಳು ಮಾಡಿದರೆ ಅಥವಾ ಅಂಥ ಯಾವುದೇ ವಿವರಗಳನ್ನು ಕೋರಿದರೆ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**18. ನೌಕರರಿಗೆ ಅಡ್ಡಿಯುಂಟು ಮಾಡುವುದಕ್ಕೆ ದಂಡನೆ.–** ಯಾರೇ ಆಗಲಿ, ಈ ಅಧಿನಿಯಮದ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಅಥವಾ ಕರ್ತವ್ಯವನ್ನು ನಿರ್ವಹಿಸುವಾಗ ಯಾರೇ ನೌಕರನ ವಿಷಯದಲ್ಲಿ ಹಸ್ತಕ್ಷೇಪ ಮಾಡಿದರೆ ಅಥವಾ ಅವನಿಗೆ ಅಡ್ಡಿ ಅಡಚಣೆಯುಂಟು ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**19. ಇತರ ಅಪರಾಧಗಳಿಗೆ ದಂಡನೆ.–** ಯಾರೇ ಆಗಲಿ,–

(ಎ) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಈ ಅಧಿನಿಯಮದ ಮೇರೆಗೆ ವಿಧಿಸಿದ ಯಾವುದೇ ಅಗತ್ಯತೆಯನ್ನು ಉಲ್ಲಂಘಿಸಿ ಯಾವುದೇ ಕೃತ್ಯ ಮಾಡಿದರೆ ಅಥವಾ ಅವುಗಳನ್ನು ಪಾಲಿಸಲು ವಿಫಲನಾದರೆ; ಅಥವಾ

(ಬಿ) ಯಾರೇ ಅಂಕಿಅಂಶಗಳ ಅಧಿಕಾರಿಯನ್ನು ಅಥವಾ ಯಾವುದೇ ಏಜೆನ್ಸಿಯನ್ನು ಅಥವಾ ಅದರ ಯಾರೇ ನೌಕರನನ್ನು ಉದ್ದೇಶಪೂರ್ವಕವಾಗಿ ವಂಚಿಸಿದರೆ ಅಥವಾ ವಂಚಿಸುವುದಕ್ಕೆ ಪ್ರಯತ್ನಿಸಿದರೆ

– ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**20. ನೌಕರರು ತಮ್ಮ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ತಪ್ಪಿದಕ್ಕೆ ದಂಡನೆ.–** ನಿಯೋಜಿತನಾದ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಯಾವುದೇ ಕರ್ತವ್ಯವನ್ನು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸುವಾಗ,–

(ಎ) ಕಾನೂನುಬದ್ಧ ಕಾರಣವಿಲ್ಲದೆ ತನ್ನ ಕರ್ತವ್ಯವನ್ನು ನಿರ್ವಹಿಸಲು ತಪ್ಪಿದರೆ ಅಥವಾ ಗೊತ್ತಿದ್ದೂ, ಯಾವುದೇ ಸುಳ್ಳು ಘೋಷಣೆಯನ್ನು, ಹೇಳಿಕೆಯನ್ನು ನೀಡಿದರೆ ಅಥವಾ ಸುಳ್ಳು ವಿವರ ಪಟ್ಟಿಕೆಯನ್ನು ಸಲ್ಲಿಸಿದರೆ; ಅಥವಾ

(ಬಿ) ತನ್ನ ಕರ್ತವ್ಯಗಳನ್ನು ನೆರವೇರಿಸಿರುವುದಾಗಿ ಸೋಗು ಹಾಕಿದರೆ ಅಥವಾ ಯಾವ ಮಾಹಿತಿಯನ್ನು ಪಡೆಯಲು ತನಗೆ ಅಧಿಕಾರವಿಲ್ಲವೋ ಆ ಮಾಹಿತಿಯನ್ನು ಪಡೆದುಕೊಂಡರೆ ಅಥವಾ ಪಡೆಯಲು ಕೋರಿದರೆ; ಅಥವಾ

(ಸಿ) ಈ ಅಧಿನಿಯಮಕ್ಕನುಸಾರವಾಗಿ ಸಂಗ್ರಹಿಸಿದ ಮಾಹಿತಿ ಅನುಸೂಚಿಗಳಲ್ಲಿ ಕಲೆ ಹಾಕಿದ ಅಥವಾ ನಮೂದಿಸಿದ ಮಾಹಿತಿಯ ಗೌಪ್ಯತೆಯನ್ನು ಉಲ್ಲಂಘಿಸದೆ ಕಾಪಾಡಿಕೊಂಡು ಬರಲು ತಪ್ಪಿದರೆ ಮತ್ತು ಈ ಅಧಿನಿಯಮದ ಮೇರೆಗೆ ಅನುಮತಿಸಿರುವಂತೆ ಹೊರತು ಈ ಅಧಿನಿಯಮದ ಮೇರೆಗೆ ಯಾರೇ ಮಾಹಿತಿದಾರನು ಭರ್ತಿ ಮಾಡಿರುವ ಯಾವುದೇ ಅನುಸೂಚಿಯ ಒಳಾಂಶಗಳನ್ನು ಅಥವಾ ಒದಗಿಸಿದ ಯಾವುದೇ ಮಾಹಿತಿಯನ್ನು ಹೊರಗೆಡವಿದರೆ

– ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**21. ನೌಕರನಂತೆ ನಟನೆ ಮಾಡಿದ್ದಕ್ಕೆ ದಂಡನೆ.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾರೇ ಆಗಲಿ, ತನ್ನ ಮಾತುಗಳಿಂದ, ವರ್ತನೆಯಿಂದ ಅಥವಾ ನಡವಳಿಕೆಯ ಮೂಲಕ ಅಂಕಿಅಂಶಗಳನ್ನು ಸಂಗ್ರಹಿಸಲು ತನಗೆ ಅಧಿಕಾರ ನೀಡಲಾಗಿದೆ ಎಂಬಂತೆ ನಟಿಸಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**22. ಸಾಮಾನ್ಯ ದಂಡನೆ.–** ಯಾರೇ ಆಗಲಿ, ಈ ಅಧಿನಿಯಮದ ಮೇರೆಗಿನ ಯಾವ ಅಪರಾಧಕ್ಕೆ ಈ ಪ್ರಕರಣದಲ್ಲಿ ಬಿಟ್ಟು ಬೇರೆಲ್ಲೂ ಯಾವುದೇ ದಂಡನೆಯನ್ನು ನಿಯಮಿಸಿಲ್ಲವೋ ಆ ಅಪರಾಧವನ್ನು ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಕಂಪನಿಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**23. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಸಹ ಆ ಅಪರಾಧದ

ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಎಚ್ಚರಿಕೆ ವಹಿಸಿದ್ದೇನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಅವರ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

ವಿವರಣೆ.- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಆ ಫರ್ಮಿನ ಪಾಲುದಾರ.

**24. ಅಪರಾಧಗಳ ಸಂಜ್ಞೇಯತೆ.-** ಯಾವುದೇ ನ್ಯಾಯಾಲಯವು, ಸಮುಚಿತ ಸರ್ಕಾರ ಅಥವಾ ಅಂಥ ಸಮುಚಿತ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಅಧಿಕಾರಿಯು ಅಥವಾ ಸಂದರ್ಭಾನುಸಾರ ಅಂಕಿಅಂಶಗಳ ಅಧಿಕಾರಿಯು ಸಲ್ಲಿಸಿದ ದೂರಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ದರ್ಜೆಗಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**25. ಅಪರಾಧದ ಸಂಬಂಧದಲ್ಲಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ.-** ಯಾರೇ ಮಾಹಿತಿದಾರನು ಮಾಡಿದ ಅಪರಾಧದ ಸಂಬಂಧದಲ್ಲಿ ಅಂಕಿಅಂಶಗಳ ಅಧಿಕಾರಿಯ ಹೊರತು ಅಥವಾ ಸಾಂಖ್ಯಿಕ ಅಧಿಕಾರಿಯಿಂದ ಮಂಜೂರಾತಿ ಪಡೆದ ಹೊರತು ಯಾವುದೇ ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ ಮತ್ತು ಮಾಹಿತಿದಾರನಲ್ಲದ ವ್ಯಕ್ತಿಗಳು ಮಾಡಿದ ಅಪರಾಧಕ್ಕಾಗಿ ಸಮುಚಿತ ಸರ್ಕಾರದಿಂದ ಹೊರತು ಅಥವಾ ಸಮುಚಿತ ಸರ್ಕಾರದಿಂದ ಸಮ್ಮತಿ ಪಡೆದ ಹೊರತು ಯಾವುದೇ ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ.

**26. ಪ್ರಕರಣಗಳನ್ನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಲು ನ್ಯಾಯಾಲಯದ ಅಧಿಕಾರ.-** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಸಂಖ್ಯೆ 2)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಎಲ್ಲಾ ಅಪರಾಧಗಳನ್ನು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಸದರಿ ಸಂಹಿತೆಯ 262 ರಿಂದ 265ರ ವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು:

ಪರಂತು, ಮ್ಯಾಜಿಸ್ಟ್ರೇಟನು ಈ ಪ್ರಕರಣದ ಮೇರೆಗೆ ಕ್ಷಿಪ್ರ ಅಧಿವಿಚಾರಣೆ ಮಾಡುವಾಗ ಆ ಪ್ರಕರಣದ ಸ್ವರೂಪವು ಯಾವುದೇ ಕಾರಣಕ್ಕಾಗಿ ಕ್ಷಿಪ್ರವಾಗಿ ಅಧಿವಿಚಾರಣೆ ಮಾಡುವುದು ಅಪೇಕ್ಷಣೀಯವಲ್ಲದ್ದಂಥದಾಗಿದೆ ಎಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಅವನು ಪಕ್ಷಕಾರರ ಅಹವಾಲನ್ನು ಆಲಿಸಿದ ತರುವಾಯ ಆ ಮಟ್ಟಿಗೆ ಆದೇಶವನ್ನು ಅಭಿಲೇಖಿಸತಕ್ಕದ್ದು ಮತ್ತು ತದನಂತರ, ಯಾವ ಸಾಕ್ಷಿದಾರನನ್ನು ಪರೀಕ್ಷೆ ಮಾಡಬಹುದಾಗಿದೆಯೋ ಆ ಯಾರೇ ಸಾಕ್ಷಿದಾರನನ್ನು ಪುನಃ ಕರೆಯತಕ್ಕದ್ದು ಮತ್ತು ಸದರಿ ಸಂಹಿತೆಯಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಪ್ರಕರಣವನ್ನು ವಿಚಾರಣೆ ಮಾಡಲು ಅಥವಾ ಮರು ವಿಚಾರಣೆ ಮಾಡಲು ಮುಂದಾಗತಕ್ಕದ್ದು.

## ಅಧ್ಯಾಯ - V

## ಪ್ರಮುಖ ಅಂಕಿಅಂಶಗಳ ಸಂಬಂಧದಲ್ಲಿ ಅಧಿಕಾರ

**27. ಪ್ರಮುಖ ಅಂಕಿಅಂಶಗಳ ಸಂಬಂಧದಲ್ಲಿ ಅಧಿಕಾರ.-** ಈ ಅಧಿನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಬಾಧಕವಾಗದಂತೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ರಾಷ್ಟ್ರೀಯ ಮಹತ್ವದ ಅಂಕಿಅಂಶಗಳ ಸಂಗ್ರಹಣೆಗಾಗಿ ಯಾವುದೇ ವಿಷಯವನ್ನು "ಪ್ರಮುಖ ಅಂಕಿಅಂಶಗಳು" ಎಂಬುದಾಗಿ ಕಾಲಕಾಲಕ್ಕೆ, ಘೋಷಿಸಬಹುದು ಮತ್ತು ಹಾಗೆ ಘೋಷಿಸಿದ ವಿಷಯದ ಬಗ್ಗೆ ಅಂಕಿಅಂಶಗಳ ಸಂಗ್ರಹಣೆಯನ್ನು ಮತ್ತು ಪ್ರಸಾರವನ್ನು ವಿನಿಯಮಿಸುವುದಕ್ಕೆ ಅವಶ್ಯವೆಂದು ಪರಿಗಣಿಸಬಹುದಾದಂಥ ಏರ್ಪಾಡುಗಳನ್ನು ಮಾಡಬಹುದು.

## ಅಧ್ಯಾಯ– VI

### ಸಂಕೀರ್ಣ

**28. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಈ ಅಧಿನಿಯಮವನ್ನು ಸಂದರ್ಭಾನುಸಾರ ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಅಥವಾ ಪಂಚಾಯತಿಗಳಲ್ಲಿ ಅಥವಾ ಪುರಸಭೆಗಳಲ್ಲಿ ಜಾರಿಗೆ ತರುವ ಬಗ್ಗೆ ಕೇಂದ್ರ ಸರ್ಕಾರವು ಯಾವುದೇ ರಾಜ್ಯಸರ್ಕಾರಕ್ಕೆ ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತಕ್ಕೆ ಅಥವಾ ಯಾವುದೇ ಸ್ಥಳೀಯ ಆಡಳಿತಕ್ಕೆ ಎಂದರೆ, ಪಂಚಾಯತಿಗಳಿಗೆ ಅಥವಾ ಪುರಸಭೆಗಳಿಗೆ ನಿರ್ದೇಶನಗಳನ್ನು ನೀಡಬಹುದು.

**29. ಲೋಕ ನೌಕರರು.–** ಯಾರೇ ಸಾಂಖ್ಯಿಕ ಅಧಿಕಾರಿಯನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಕಿಅಂಶಗಳ ಸಂಗ್ರಹಣೆಗಾಗಿ ಅಥವಾ ಅಧಿಕೃತ ಅಂಕಿಅಂಶಗಳ ಸಿದ್ಧತೆಗಾಗಿ ಅಧಿಕೃತಗೊಂಡ ಯಾರೇ ವ್ಯಕ್ತಿಯನ್ನು ಭಾರತ ದಂಡ ಸಂಹಿತೆ, 1860 (1860ರ 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**30. ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ವಿಷಯವನ್ನು ನಿರ್ಧರಿಸಲು ಸಮುಚಿತ ಸರ್ಕಾರಕ್ಕೆ ಅಥವಾ ಅಂಕಿಅಂಶಗಳ ಅಧಿಕಾರಿಗೆ ಅಥವಾ ಏಜೆನ್ಸಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕನುಸಾರವಾಗಿ ಕೈಗೊಂಡ ಅಥವಾ ಕೈಗೊಳ್ಳಲಾಗುವ ಯಾವುದೇ ಕ್ರಮದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**31. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಹೊರಡಿಸಿದ ಯಾವುದೇ ನಿಯಮದ ಅಥವಾ ನಿರ್ದೇಶನಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಸಮುಚಿತ ಸರ್ಕಾರದ ಅಥವಾ ಏಜೆನ್ಸಿಯ ಅಥವಾ ಯಾರೇ ಅಂಕಿಅಂಶಗಳ ಅಧಿಕಾರಿಯ ಅಥವಾ ಇತರ ಅಧಿಕಾರಿಗಳ ಅಥವಾ ನೌಕರರ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**32. ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ಜನಗಣತಿ ಅಧಿನಿಯಮ, 1948 (1948ರ 37)ರ ಮೇರೆಗೆ ಹೊರಡಿಸಿದ ನಿರ್ದೇಶನಗಳು ಯಾವುವಾದರೂ ಇದ್ದರೆ ಅವುಗಳಿಗನುಸಾರವಾಗಿ ಮಾನವ ಜನಸಂಖ್ಯೆಯ ಗಣತಿಯನ್ನು ನಡೆಸುವ ಸಂಬಂಧದಲ್ಲಿ ಹೊರತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರುವುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**33. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಬಹುದು, ಎಂದರೆ:–

(ಎ) ಕೇಂದ್ರ ಸರ್ಕಾರದಿಂದ ಅಂಕಿಅಂಶಗಳ ಅಧಿಕಾರಿಗಳ ನಾಮನಿರ್ದೇಶನ ಮತ್ತು ನೋಂದಣಿ ಸೇರಿದಂತೆ 3ನೇ ಪ್ರಕರಣದ ಉದ್ದೇಶಗಳನ್ನು ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ಈಡೇರಿಸಲು ಮತ್ತು ಅಂಕಿಅಂಶಗಳ ಸಂಗ್ರಹಣೆಯಲ್ಲಿ ಅನವಶ್ಯಕ ಪುನರಾವರ್ತನೆ ಆಗುವುದನ್ನು ತಪ್ಪಿಸಲು ಸಮನ್ವಯ ತತ್ವಗಳು;

(ಬಿ) ಸಮುಚಿತ ಸರ್ಕಾರವು 4ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಂಕಿಅಂಶಗಳ ಸಂಗ್ರಹಣೆಯ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯನ್ನು ಅಥವಾ ಏಜೆನ್ಸಿಯನ್ನು ಅಥವಾ ಕಂಪನಿಯನ್ನು ಅಥವಾ ಸಂಘ ಸಂಸ್ಥೆಯನ್ನು ಅಥವಾ ಸಂಘವನ್ನು ಯಾವ ನಿಬಂಧನೆಗಳ, ಷರತ್ತುಗಳ ಮತ್ತು ಸುರಕ್ಷತಾ ಕ್ರಮಗಳ ಮೇರೆಗೆ ತೊಡಗಿಸಬಹುದೋ ಆ ನಿಬಂಧನೆಗಳು, ಷರತ್ತುಗಳು ಮತ್ತು ಸುರಕ್ಷತಾ ಕ್ರಮಗಳು;

(ಸಿ) ಮಾಹಿತಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒದಗಿಸಲು ಅಗತ್ಯಪಡಿಸಲಾಗಿದೆಯೋ ಆ ನಮೂನೆಯನ್ನು ಮತ್ತು ರೀತಿಯನ್ನು ನಿಯಮಿಸುವ ತತ್ವಗಳು;

(ಡಿ) 8ನೇ ಪ್ರಕರಣದಿಂದ ಪ್ರದತ್ತವಾದ, ದಸ್ತಾವೇಜುಗಳನ್ನು ಪರಿಶೀಲಿಸುವ ಹಕ್ಕನ್ನು ಮತ್ತು ಯಾವುದೇ ಆವರಣವನ್ನು ಪ್ರವೇಶಿಸುವ ಹಕ್ಕನ್ನು ಯಾವ ರೀತಿಯಲ್ಲಿ ಚಲಾಯಿಸಬಹುದೋ ಆ ರೀತಿಯನ್ನು ನಿಯಮಿಸುವ ತತ್ತ್ವಗಳು;

(ಇ) ಈ ಅಧಿನಿಯಮದ ಮೇರೆಗೆ ಯಾವ ವಿಷಯವನ್ನು ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದೋ ಆ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು

ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯವು ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**34. ನಿರಸನ ಮತ್ತು ಉಳಿಸುವಿಕೆ.–** (1) ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ, 1953 (1953ರ 32)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ತೆಗೆದುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(3) ಸದರಿ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳು, ಈ ಅಧಿನಿಯಮದ ಮೇರೆಗೆ ಹೊಸ ನಿಯಮಗಳನ್ನು ರಚಿಸುವವರೆಗೆ ಜಾರಿಯಲ್ಲಿರುವುದು ಹಾಗೂ ಪ್ರವರ್ತನೆಯಲ್ಲಿರುವುದು ಮುಂದುವರಿಯತಕ್ಕದ್ದು.

* * * * *